# ಮರಳಿ ಬಾ ಮ್ಯಾಕ್ಸ್‌ವೆಲ್

ಗ್ಲೆನ್ ಮ್ಯಾಕ್ಸ್‌ವೆಲ್! ಇನ್ನೂ 31ರ ಹರೆಯ, ಹೊಡಿಬಡಿಯ ಬ್ಯಾಟ್ಸ್‌ಮನ್. ಜಗತ್ತಿನಾದ್ಯಂತ ಲಕ್ಷಾಂತರ ಅಭಿಮಾನಿಗಳಿದ್ದಾರೆ. ಈತ ಮೈದಾನಕ್ಕೆ ಇಳಿದರೆ ಬೌಲರ್‌ಗಳಿಗೂ ನಡುಕ, ಎದುರಾಳಿ ಕಪ್ತಾನನಿಗೂ ತಲೆನೋವು. ಬೌಂಡರಿಗಳನ್ನು ಬಾರಿಸುವುದೆಂದರೆ ಮಕ್ಕಳಾಟದಂತೆ. ಸಿಕ್ಸರ್‌ಗಳಿಗೆ ಪ್ರೇಕ್ಷಕರು ಹುಚ್ಚೆದ್ದು ಕುಣಿಯುತ್ತಾರೆ. ಜೊತೆಗೆ ಈತನ ಆಫ್‌ಬ್ರೇಕ್ ಬೌಲಿಂಗ್ ಕೂಡಾ ಎದುರಾಳಿಗಳ ದಿಕ್ಕೆಡಿಸುತ್ತದೆ. ಈತ ಆಸ್ಟ್ರೇಲಿಯಾದ ಸೂಪರ್‌ಸ್ಟಾರ್.

ಹೆಸರಲ್ಲೇನೋ 'ವೆಲ್' ಇದೆ, ಆದರೆ ಸದ್ಯಕ್ಕೆ ಈತ ಚೆನ್ನಾಗಿಲ್ಲ! ಶ್ರೀಲಂಕಾ ವಿರುದ್ಧ ಇತ್ತೀಚೆಗೆ ಮುಗಿದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಮಿಂಚಿನ ಆಟವಾಡಿ ಕೇವಲ 28 ಎಸೆತಗಳಲ್ಲಿ 62 ರನ್ ಗಳಿಸಿದ. ಎರಡನೇ ಪಂದ್ಯದಲ್ಲಿ ಚುರುಕಾದ ಫೀಲ್ಡಿಂಗ್ ಪ್ರದರ್ಶಿಸಿದ. ಆದರೆ ಮೂರನೇ ಪಂದ್ಯಕ್ಕೆ 'ನನ್ ಕೈಲಾಗಲ್ಲ' ಎಂದು ಕೈಚೆಲ್ಲಿದ್ದಾನೆ. ಕಾರಣ– ಮಾನಸಿಕ ಸಮಸ್ಯೆ! ಅದಕ್ಕಾಗಿ ಕ್ರಿಕೆಟ್‌ಗೆ ಅನಿರ್ದಿಷ್ಟಾವಧಿ ರಜೆ ಹಾಕಿದ್ದಾನೆ.

ಕ್ರಿಕೆಟರ್‌ಗಳು ಮಾನಸಿಕ ಸಮಸ್ಯೆಯಿಂದ ಬಳಲುವುದು ಹೊಸತೇನಲ್ಲ. ಆದರೆ ಅದನ್ನು ನೇರವಾಗಿ ಕೋಚ್‌ಗಳ ಬಳಿ ಹೇಳಿ 'ರಜೆ' ಪಡೆದುಕೊಳ್ಳುವುದು ಅಪರೂಪ. ಎರಡು ವರ್ಷಗಳ ಹಿಂದೆ ನ್ಯೂಜಿಲೆಂಡ್‌ನ ಆಲ್‌ರೌಂಡರ್ ಜಿಮ್ಮಿ ನೀಶಮ್ ಮಾನಸಿಕ ಒತ್ತಡ ಹೆಚ್ಚಾಗಿ ತಂಡದಿಂದಲೇ 'ಔಟ್' ಆಗಿದ್ದರು. ಕಳೆದ ವರ್ಷ ಇಂಗ್ಲೆಂಡಿನ ಮಾಜಿ ಸ್ಪಿನ್ನರ್ ಮೋಂಟಿ ಪನೇಸರ್ ಮಾನಸಿಕ ಸಮಸ್ಯೆಯಿಂದ ಬಳಲಿದ್ದು ವರದಿಯಾಗಿತ್ತು. ಈಗ ಮ್ಯಾಕ್ಸ್‌ವೆಲ್ ಸರದಿ.




ಈ ವರ್ಷದ ಆರಂಭದಿಂದಲೇ ಮ್ಯಾಕ್ಸ್‌ವೆಲ್ ಮಾನಸಿಕ ಸಮಸ್ಯೆಗೆ ಒಳಗಾಗಿದ್ದರಂತೆ. ಆಸ್ಟ್ರೇಲಿಯಾ ತಂಡದ ಹೆಡ್ ಕೋಚ್ ಜಸ್ಟಿನ್ ಲ್ಯಾಂಗರ್‌ಗೂ ಅನುಮಾನ ಬಂದಿತ್ತು. 'ಕಳೆದ 12 ತಿಂಗಳಿಂದ ಅವರ ಆಟದಲ್ಲಿ ಎಂದಿನ ವೇಗ ಇರಲಿಲ್ಲ. ಬಹುತೇಕ ಕ್ರಿಕೆಟಿಗರು ಮೈದಾನಕ್ಕೆ ಇಳಿದಾಗ ಜನರ ಹರ್ಷೋದ್ಗಾರದ ಮಧ್ಯೆ ಎಲ್ಲ ಒತ್ತಡಗಳನ್ನೂ ಒಳಗೇ ಅದುಮಿ ಹಿಡಿಯುತ್ತಾರೆ' ಎಂದಿದ್ದಾರೆ ಜಸ್ಟಿನ್. ಆದರೆ ಮ್ಯಾಕ್ಸ್‌ವೆಲ್ ಬಗ್ಗೆ ಜಸ್ಟಿನ್‌ಗೆ ಹೆಮ್ಮೆಯಿದೆ. 'ಆತ ಸಹ ಆಟಗಾರರಿಗೆ ಮತ್ತು ನನಗೆ ವಿಷಯವನ್ನು ಸ್ಪಷ್ಟವಾಗಿ ತಿಳಿಸಿ, ಮೂರನೇ ಪಂದ್ಯಕ್ಕೆ ಹೊರಗುಳಿದಿರುವುದು ಮೆಚ್ಚಬೇಕಾದ ಸಂಗತಿ' ಎಂದಿದ್ದಾರೆ.

ಕ್ರಿಕೆಟ್ ಭಾಷೆಯಲ್ಲಿ ಈತನಿಗೆ 'ಪವರ್ ಹಿಟ್ಟರ್' ಎಂದೇ ಹೆಸರು. ಏಕದಿನ ಮತ್ತು 20 ಓವರ್‌ಗಳ 'ಟ್ವೆಂಟಿ20' ಈತನ ಅಚ್ಚುಮೆಚ್ಚಿನ ಪ್ರಾಕಾರಗಳು. ಕಳೆದ ಮೂರು ವರ್ಷಗಳಲ್ಲಿ ಟ್ವೆಂಟಿ20 ಪಂದ್ಯಗಳಲ್ಲಿ ಈತ ಆಸ್ಟ್ರೇಲಿಯಾಕ್ಕೆ ಹಲವು ಪಂದ್ಯಗಳನ್ನು ಗೆದ್ದುಕೊಟ್ಟಿದ್ದಾನೆ. ಟ್ವೆಂಟಿ20 ಪಂದ್ಯಗಳಲ್ಲಿ ಆಡುತ್ತಿರುವ ಜಗತ್ತಿನ, 1500 ರನ್‌ಗಳನ್ನು ದಾಟಿರುವ ಎಲ್ಲ 26 ಆಟಗಾರರ ಪಟ್ಟಿ ನೋಡಿದರೆ, ಮ್ಯಾಕ್ಸ್‌ವೆಲ್ 158.20 ಸ್ಟ್ರೈಕ್‌ರೇಟ್‌ನೊಂದಿಗೆ ಎರಡನೆಯವನಾಗಿ ನಿಲ್ಲುತ್ತಾನೆ. (161 ಸ್ಟ್ರೈಕ್‌ರೇಟ್ ಉಳ್ಳ ಕಾಲಿನ್ ಮುನ್ರೊ ಮೊದಲಿಗ.) ಟ್ವೆಂಟಿ20 ಯಲ್ಲಿ ಅತ್ಯಧಿಕ ಶತಕ ಬಾರಿಸಿದ ಆಟಗಾರರ ಟಾಪ್ ಪಟ್ಟಿ ನೋಡಿದರೆ (ನಮ್ಮ ರೋಹಿತ್ ಶರ್ಮಾ ಮೊದಲಿಗ) ಮ್ಯಾಕ್ಸ್‌ವೆಲ್ ಮೂರನೆಯವರು. ಟ್ವೆಂಟಿ20ಯಲ್ಲಿ ಮ್ಯಾಕ್ಸ್‌ವೆಲ್ ರನ್ ಸರಾಸರಿ 45.08. ಕಳೆದ ಫೆಬ್ರುವರಿಯಲ್ಲಿ ಬೆಂಗಳೂರಿನ ಪಂದ್ಯವೊಂದರಲ್ಲಿ ಈತ 55 ಎಸೆತಗಳಲ್ಲಿ ಬಾರಿಸಿದ 113 ರನ್‌ಗಳನ್ನು ಅಭಿಮಾನಿಗಳು ಯಾವತ್ತೂ ಮರೆಯುವಂತಿಲ್ಲ. 20 ಓವರ್‌ಗಳ ಶೈಲಿಗೆ ಈತ ಎಷ್ಟು ಪರಿಪೂರ್ಣವಾಗಿ ಹೊಂದಿಕೊಂಡಿದ್ದಾನೆಂದರೆ, ಇತ್ತೀಚೆಗೆ 50 ಓವರ್‌ಗಳ ಪಂದ್ಯಕ್ಕೂ ಆಯ್ಕೆ ಆಗುತ್ತಿಲ್ಲ. ಟೆಸ್ಟ್ ಪಂದ್ಯಗಳಿಗಂತೂ ಈತ ಖಂಡಿತಾ ಫಿಟ್ ಅಲ್ಲ ಎನ್ನುವ ತೀರ್ಮಾನಕ್ಕೆ ಆಯ್ಕೆಗಾರರು ಬಂದಿದ್ದಾರೆ.

ಅದಕ್ಕೂ ಕಾರಣಗಳಿವೆ. 'ಟ್ವೆಂಟಿ20ಯಲ್ಲಿ ಫಿಕ್ಸೆಡ್ ಸ್ಥಾನವಿತ್ತು. 4 ಅಥವಾ 5ನೇ ಕ್ರಮಾಂಕದಲ್ಲಿ ಆಡುತ್ತಿದ್ದೆ. ಕಡಿಮೆ ಎಸೆತಗಳಲ್ಲಿ ಅತ್ಯಧಿಕ ರನ್‌ಗಳನ್ನು ಗಳಿಸುವುದಷ್ಟೇ ನನ್ನ ಕೆಲಸ. ಆದರೆ ಏಕದಿನ ಪಂದ್ಯಗಳಲ್ಲಿ ಯಾವ ಕ್ರಮಾಂಕ ಅನ್ನುವುದೇ ಸ್ಪಷ್ಟ ಇರುತ್ತಿರಲಿಲ್ಲ. ಏಳನೇ ಕ್ರಮಾಂಕದವರೆಗೂ ಆಡಲು ಹೋಗುತ್ತಿದ್ದೆ. ಟೆಸ್ಟ್‌ನಲ್ಲೂ ಹಾಗಾಗಿಯೇ ಹೆಚ್ಚು ಅವಕಾಶಗಳು ಸಿಗಲಿಲ್ಲ' ಎಂದಿದ್ದಾನೆ ಮ್ಯಾಕ್ಸ್‌ವೆಲ್.

ಹಾಗೆ ನೋಡಿದರೆ ಮ್ಯಾಕ್ಸ್‌ವೆಲ್ ಮೈದಾನದಿಂದ ಹಿಂದೆ ಸರಿಯಲು ಇದು ಸೂಕ್ತ ಕಾಲವೇ ಅಲ್ಲ. ಈಗಿನ ಫಾರ್ಮ್‌ನಲ್ಲಿ ಈತ ಮುಂದಿನ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾದಲ್ಲೇ ನಡೆಯಲಿರುವ ಟ್ವೆಂಟಿ20 ವಿಶ್ವಕಪ್ ಮತ್ತು 2021ರಲ್ಲಿ ಭಾರತದಲ್ಲಿ ನಡೆಯಲಿರುವ ಟ್ವೆಂಟಿ20 ವಿಶ್ವಕಪ್‌ಗೂ ಆಯ್ಕೆ ಆಗುವುದು ಖಂಡಿತವಿತ್ತು. ಆದರೆ ಮಾನಸಿಕ ಸಮಸ್ಯೆ ಎಷ್ಟು ಕಾಲ ಮುಂದುವರಿಯುತ್ತದೆ ಎನ್ನುವುದು ಖಚಿತವಿಲ್ಲ. 'ಮುಂದಿನ ಬೇಸಿಗೆಯ ವೇಳೆಗೆ ಮ್ಯಾಕ್ಸ್‌ವೆಲ್ ಮತ್ತೆ ತಂಡಕ್ಕೆ ಹಿಂದಿರುಗಬಹುದು' ಎಂದು ಆಸ್ಟ್ರೇಲಿಯಾದ ಸಹ ಆಟಗಾರರು ಭರವಸೆ ವ್ಯಕ್ತಪಡಿಸಿದ್ದಾರೆ. ಮಾನಸಿಕ ಸಮಸ್ಯೆಯ ಚಿಕಿತ್ಸೆ ಕೇವಲ ಔಷಧಿಯದ್ದು ಮಾತ್ರ ಅಲ್ಲವಾದ್ದರಿಂದ ಈ ಬಗ್ಗೆ ಸ್ಪಷ್ಟವಾಗಿ ಹೇಳುವುದೂ ಕಷ್ಟ. ಕ್ರಿಕೆಟ್ ಮೈದಾನದ ಅಗಾಧ ಒತ್ತಡವನ್ನು ಇಲ್ಲವಾಗಿಸಬೇಕಾದರೆ, ಸ್ವಲ್ಪ ಕಾಲ ಅದರಿಂದ ದೂರವೇ ಉಳಿದು ಬೇರೆ ಬೇರೆ ಕೆಲಸ, ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದು ಒಳ್ಳೆಯದು ಎನ್ನುತ್ತಾರೆ ಮಾನಸಿಕ ತಜ್ಞರು. ಇತ್ತೀಚಿನ ಸಂದರ್ಶನವೊಂದರಲ್ಲಿ ಮ್ಯಾಕ್ಸ್‌ವೆಲ್ ಹೇಳಿದ್ದು ಇಷ್ಟು– 'ಕ್ರಿಕೆಟ್ ವೃತ್ತಿಜೀವನದ ಬಗ್ಗೆ ನಾನು ಸಂತೃಪ್ತನಾಗಿದ್ದೇನೆ. ಕ್ರಿಕೆಟ್‌ನ ಎಲ್ಲ ಮೂರು ಪ್ರಾಕಾರಗಳಲ್ಲೂ ಶತಕಗಳನ್ನು ಹೊಡೆದಿದ್ದೇನೆ. ಇನ್ನಷ್ಟು ಸಾಧಿಸಲು ಅವಕಾಶವಿದೆ ಎನ್ನುವುದು ನಿಜ.' ಭಾರತದ ಐಪಿಎಲ್‌ನಲ್ಲೂ ಸಾಕಷ್ಟು ಮಿಂಚುತ್ತಿರುವ ಈ 'ಪವರ್ ಹಿಟ್ಟರ್' ಆರೋಗ್ಯವಂತನಾಗಿ ಶೀಘ್ರ ಮರಳಲಿ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65